ಸಾಯುವವರೆಗೂ ಹೀಗೆಯೇ ನಿಶ್ಚಿಂತೆಯಾಗಿ ಇರಬಹುದೆಂದು ಲೆಕ್ಕಿಸಿದ್ದವನಿಗೆ ಆಘಾತವಾಗಿರಬೇಕು. ಆದರೂ ಸಾವರಿಸಿಕೊಂಡು, 'ನೀವು ಹೇಳುವುದರಲ್ಲಿ ನ್ಯಾಯ ಇದೆ. ಮುದುಕನಾಗಿದ್ದೇನೆ. ನನ್ನ ಹೊಣೆಗಾರಿಕೆಯನ್ನು ಹಸ್ತಾಂತರ ಮಾಡಬೇಕು. ಇದರಲ್ಲಿ ಎರಡು ಪ್ರಶ್ನೆಗಳಿವೆ. ಮುಂದೆ ನಾನೇನು ಮಾಡುವುದು ಎನ್ನುವುದು ನನಗೆ ಸಂಬಂಧ ಪಟ್ಟ ಪ್ರಶ್ನೆ. ನನ್ನ ಇಲ್ಲಿಯ ಜಾಗಕ್ಕೆ ಮುಂದೆ ಯಾರು ಅನ್ನುವುದು ನಿಮಗೆ ಸಂಬಂಧಪಟ್ಟದ್ದು. ಈ ಬಗ್ಗೆ ನೀವೇನಾದರೂ ಚಿಂತಿಸಿದ್ದೀರಾ?' ಕೇಳಿದ್ದ ಅಬ್ದುಲ್ಲ.

'ನಮಗೆ ಹಲವು ಆಯ್ಕೆಗಳಿವೆ. ಇವನ್ನೆಲ್ಲ ನಿನ್ನೊಂದಿಗೆ ಚರ್ಚಿಸಲು ಬರುವುದಿಲ್ಲ. ಆದರೆ ನಿನ್ನ ಜಾಗಕ್ಕೆ ಕುಟುಂಬದ ಯಾರನ್ನಾದರೂ ನೀನು ಶಿಫಾರಸು ಮಾಡಿದರೆ ಅದನ್ನು ಪರಿಗಣಿಸುವಂತೆ ಸಾಹುಕಾರರು ಹೇಳಿದ್ದಾರೆ. ವರ್ಷದ ಕೊನೆಗೆ ನಿವೃತ್ತಿ ಅಂದರೆ, ಒಂದು ತಿಂಗಳು ಸಮಯವಿದೆ' ಎಂದೆ ನಾನು.

ಸರಿಯೆಂದು ಒಪ್ಪಿಕೊಂಡ ಅಬ್ದುಲ್ಲ ಆತನ ಸಂಬಂಧಿಗಳಲ್ಲಿ ವಾಚ್‌ಮ್ಯಾನ್ ಹುದ್ದೆಗೆ ಸೇರಬಯಸುವ ಹುಡುಗರಿಗಾಗಿ ತೀವ್ರ ಪರಿಶೋಧ ನಡೆಸಿದ್ದ. ಇವನ ಉತ್ತರಾಧಿಕಾರಿಯಾಗಿ ಪಟ್ಟಕಟ್ಟಿಸಿಕೊಳ್ಳಲು ಅಬ್ದುಲ್ಲನ ಸ್ವಂತ ಮಗ ಸಹಿತ ಆತನ ಹೆಚ್ಚಿನ ಸಂಬಂಧಿಗಳೆಲ್ಲ ಒಪ್ಪಿಕೊಳ್ಳಲಿಲ್ಲ. ಹೆಚ್ಚಿನವರಿಗೆ ಅದಾಗಲೇ ಹೆಚ್ಚು ವೇತನ ಸಿಗುತ್ತಿತ್ತು. ಇನ್ನು ಕೆಲವರು ಅಬ್ದುಲ್ಲನ ಕೆಲಸಕ್ಕೆ ಬಾರದ ಹಾಸ್ಯಾಸ್ಪದ ಮಾತಿಗೆ ನಕ್ಕುಬಿಟ್ಟಿದ್ದರು. ನಿರಾಶನಾದ ಅಬ್ದುಲ್ಲ ಮೂರು ವಾರಗಳ ಬಳಿಕ ಡ್ರೈವರನಿಗೆ ಫೋನ್ ಮಾಡಿ ನನ್ನನ್ನು ಸಂಪರ್ಕಿಸಿ, 'ನನ್ನ ವಂಶದವರು

